
> ಮನುಷ್ಯ ಯಾವ್ಯಾವುದರ ಮೂಲಕವೋ ಹಾಯುತ್ತಲೇ ಇರುತ್ತಾನೆ. ನಾವೆಲ್ಲರೂ ಘಟಿಸುತ್ತಲೇ ಇದ್ದೇವೆ. ಆಗಿ ಮುಗಿಯಿತು ಎನ್ನುವುದು ಯಾವುದೂ ಇರುವುದಿಲ್ಲ. ಈ ಆಗ್ತಾ ಇರುವ ಕ್ಷಣಗಳನ್ನು ಹಿಡಿಯುವುದೇ ನನ್ನ ಕಥನದ ಹವಣಿಕೆ. ಆಗಿ ಹೋದ ಕ್ಷಣಗಳ ಫೋಟೊ ಹಿಡಿದು ಸ್ಥಿರ ಚಿತ್ರ ಕೊಡುವುದರಲ್ಲಿ ನನಗೆ ಆಸಕ್ತಿ ಇಲ್ಲ.



ಕೇಳಲಿಕ್ಕೆ ಸಾಧ್ಯವಾಯ್ತು. ಅದರ ಬಗ್ಗೆ ಹೇಳಲಿಕ್ಕೆ ಸಾಧ್ಯವಾಯ್ತು. ಇಲ್ಲಿ ನಾವು ಮಾಡಬಹುದಾದದ್ದು ಇಷ್ಟೆ; ಪೂರ್ವಗ್ರಹವಿಲ್ಲದೇ ಬದುಕಬೇಕು. ತೀವ್ರವಾಗಿ ಬದುಕುತ್ತಾ ಇದ್ದರೆ ಅದರ ಜಿಜ್ಞಾಸೆ ಬರೆಯುವಾಗ ನಡೆಯುತ್ತಿರುತ್ತದೆ.

◆ ನಿಮ್ಮ ಬರವಣಿಗೆ ಪ್ರಕ್ರಿಯೆ ಬಗ್ಗೆ ಸ್ವಲ್ಪ ಹೇಳಿ.

ನಾನು ತುಂಬ ಅವಸರದ, ಕೊನೆ ಗಳಿಗೆಯ ಬರಹಗಾರ. ಆದರೆ ಬರೆಯಲಿಕ್ಕೆ ಕೂತರೆ ನಾನು ಪೂರ್ತಿ ಅದ್ರಲ್ಲಿ ಮುಳುಗಿಹೋಗ್ತೇನೆ. ನಮ್ಮ ಕಡೆ ಫಡ್ಚ ಅಂತಾರಲ್ಲ, ಹಾಗೆ ಬರವಣಿಗೆಯಲ್ಲಿ ಫಡ್ಚ ಆಗಿಬಿಡ್ತೇನೆ ನಾನು. ಪೂರ್ತಿ ಶರಣಾಗುತ್ತೇನೆ. ನನಗೆ ನನ್ನ ಕಥೆ ಗೊತ್ತಿರುವುದಿಲ್ಲ. ಗೊತ್ತುಮಾಡಿಕೊಳ್ಳಲಿಕ್ಕಾಗಿಯೇ ಬರೆಯುತ್ತೇನೆ.

ಕೆಲವು ಲೇಖಕರಿಗೆ ತಾನು ಏನು ಬರೆಯಲಿಕ್ಕೆ ಹೊರಟಿದ್ದೇನೆ ಎನ್ನುವುದು ಮೊದಲೇ ಗೊತ್ತಿರುತ್ತದೆ. ಅದನ್ನು ಬರೀತಾರೆ. ನಂತರ ಮತ್ತೆ ಮತ್ತೆ ತಿದ್ದುತ್ತಾರೆ. ಆದರೆ ನಾನು ನನ್ನ ಕಿಚನ್‌ನಲ್ಲಿ ನಾನು ಯಾರನ್ನೂ ಬಿಟ್ಟುಕೊಳ್ಳುವುದಿಲ್ಲ. ಅದು ನನ್ನ ಅಡುಗೆ ಕೋಣೆ. ಅಲ್ಲಿ ಏನಾಗಬೇಕೋ ಅದಾಗ್ತದೆ. ನಾನು ಸಿಂಗಲ್ ಡ್ರಾಫ್ಟ್ ಕತೆಗಾರ ಮತ್ತು ಈಗಲೂ ಕೈಯಲ್ಲಿಯೇ ಬರೆಯುತ್ತೇನೆ. ನೇರವಾಗಿ ಟೈಪ್ ಮಾಡಿದರೆ ಸುಂದರವಾಗಿ ಫೈನಲ್ ಆಗಿ ಕಾಣುತ್ತದೆ. ನನಗದು ಕವರ್ ಜತೆಗೆ ಚಾಕೊಲೇಟ್ ತಿಂದಂಗೆ ಅನಿಸ್ತದೆ. ಹಾಗೆಯೇ ಟೈಟಲ್ ಕೊಡುವುದಕ್ಕೆ ನಾನು ಸಾಕಷ್ಟು ಒದ್ದಾಡ್ತೇನೆ. ಯಾಕೆಂದರೆ